ನಮ್ಮ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಸಾಕಷ್ಟು ಕೆಲಸಗಳನ್ನು ಮಾಡುತ್ತಾ ಇದ್ದೇವೆ. ನಾನು ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ನಾವು ಇಡೀ ರಾಷ್ಟ್ರದಲ್ಲಿಯೇ ಒಂದು ಇತಿಹಾಸ ದಾಖಲೆ ಮಾಡಿದಂಥ ಘಟನೆ, ಸಬ್ಸಿಡಿ ಬಹಳ ವರ್ಷಗಳಿಂದ ಇದ್ದಂತದ್ದು. ಇದನ್ನು ಕೊಡುವುದರ ಮುಖಾಂತರವಾಗಿ, ಹೊಸ ಕೈಗಾರಿಕೆಗಳಿಗೂ ಜೊತೆಯಲ್ಲಿಯೇ ಕೊಡುವಂಥ ಕೆಲಸವನ್ನು ನಾವು ಮಾಡುತ್ತಾ ಇದ್ದೇವೆ. ಎರಡನೆಯದು ಇವತ್ತು ಸನ್ಮಾನ್ಯ ಶಾಸಕರು ಕಾರವಾರ ಜಿಲ್ಲೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎನ್ನುವಂಥ ಪ್ರಶ್ನೆ ಕೇಳಿದ್ದಾರೆ. ಒಟ್ಟು 11 ಕೋಟಿ ರೂಪಾಯಿಗಳು ಬಾಕಿ ಇದ್ದಂಥ ಸಬ್ಸಿಡಿಯಲ್ಲಿ, ನಾವು ಈಗಾಗಲೇ ಡಿಸೆಂಬರ್ ಅಂತ್ಯದೊಳಗೆ 88 ಕೋಟಿ ರೂಪಾಯಿಗಳನ್ನು ಕಾರವಾರ ಜಿಲ್ಲೆಗೆ ಬಿಡುಗಡೆ ಮಾಡಿದ್ದೇವೆ. ಇನ್ನೂ ಎರಡು ಕೋಟಿ 90 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ. ನಾವು ಹಣಕಾಸಿನ ಇಲಾಖೆಯವರನ್ನು ಹೆಚ್ಚಿನ ಪ್ರಮಾಣದಲ್ಲಿ ಹಣವನ್ನು ಕೇಳಿದ್ದೇವೆ. ಅದು ಬಂದತಕ್ಷಣ, ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಡಾ ಎಂ.ಪಿ.ಕರ್ಕಿ: ಈಗ ತಾವು ಎಲ್ಲಿಯತನಕ ಅರ್ಜಿಯನ್ನು ವಿಲೇವಾರಿ ಮಾಡಿದ್ದೀರಾ? ಯಾವ ತಾರೀಖಿನವರೆಗೆ, ಡಿಸೆಂಬರ್ ಅಥವಾ ಜನವರಿಯೇ ಅಥವಾ ಫೆಬ್ರುವರಿ 1999, ಯಾವ ತಾರೀಖಿನವರೆಗಿನ ಅರ್ಜಿಯನ್ನು ವಿಲೇವಾರಿ ಮಾಡಿ ಸಬ್ಸಿಡಿ ಕೊಟ್ಟಿದ್ದೀರಿ? ಒಂದು ಕಟ್‌ಆಫ್ ಡೇಟ್, ಎಲ್ಲಿಯತನಕ ನೀವು ಸಬ್ಸಿಡಿ ಕೊಟ್ಟಿದ್ದೀರಿ ಎಂಬುದನ್ನು ಹೇಳಬೇಕು.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: 1-4-96ರ ವರೆಗಿನ ಅರ್ಹ ಅರ್ಜಿಗಳಿಗೆ ನಾವು ಸಬ್ಸಿಡಿಯನ್ನು ಕೊಡುತ್ತಾ ಇದ್ದೇವೆ. ಮತ್ತು ಮಾರ್ಚ್ 1998ರ ವರೆಗೆ 50 ಪರ್ಸೆಂಟ್ ಸಬ್ಸಿಡಿ ಕೊಡಲಾಗಿದೆ. ಡಿಸೆಂಬರ್ 1998ರ ವರೆಗೆ 100ಪರ್ಸೆಂಟ್ ಸಬ್ಸಿಡಿ ಕೊಡಲಾಗಿದೆ.

ಬಾದಾಮಿಗೆ ಕುಡಿಯುವ ನೀರಿನ ಯೋಜನೆಯ ಅಂದಾಜು.

323(2122)

ಶ್ರೀ ಚಿಮ್ಮನಕಟ್ಟಿ ಬಾಲಪ್ಪ ಭೀಮಪ್ಪ (ಬಾದಾಮಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಪಟ್ಟಣದ ಶಾಶ್ವತ ಕುಡಿಯುವ ನೀರಿನ ಯೋಜನೆಯ ಅಂದಾಜು ವೆಚ್ಚ ಎಷ್ಟು?

ಆ) ಈ ಯೋಜನೆಗೆ ಮಂಜೂರಾತಿ ನೀಡಲಾಗಿದೆಯೇ?

ಇ) ಹಾಗಿದ್ದಲ್ಲಿ, ಈ ಯೋಜನೆಯ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು):

ಅ) ಬಾದಾಮಿ ಪಟ್ಟಣದ ನೀರು ಸರಬರಾಜು ಯೋಜನೆಯ ಅಂದಾಜು ವೆಚ್ಚವು ರೂ. 340.00 ಲಕ್ಷಗಳು

ಆ) ಸರ್ಕಾರವು ತನ್ನ ಆಜ್ಞೆ ಸಂಖ್ಯೆ. ನಅಇ 85 ಯುಡಬ್ಲ್ಯುಎಸ್ 96 ದಿನಾಂಕ 10.2.99ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಇ) ಈ ಯೋಜನೆ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಲು ಸಧ್ಯದಲ್ಲೇ ಟೆಂಡರ್ ಕರೆಯಲಾಗುತ್ತಿದೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಬಾದಾಮಿ ಪಟ್ಟಣದ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಸುಮಾರು 3 ಕೋಟಿ 40 ಲಕ್ಷ ರೂಪಾಯಿಗಳನ್ನು ತಾವು ಮಂಜೂರ್ಮಾಡಿದ್ದೀರಿ. ತಮಗೂ ಮತ್ತು ಸರ್ಕಾರಕ್ಕೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಅದರ ಜೊತೆಗೆ ಈ ಕಾಮಗಾರಿಯೊಳಗೆ, 3 ಕೋಟಿ 40 ಲಕ್ಷ ರೂಪಾಯಿಗಳಲ್ಲಿ ಕೇಂದ್ರ ಸರ್ಕಾರದ್ದು 50 ಪರ್ಸೆಂಟ್ ಇರಬಹುದು. ನೀವು ಈ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಈ ಸದನ ಮುಗಿದ ತಕ್ಷಣ ತಾವು ಶಿಲಾನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳುತ್ತೀರಾ, ಹೇಗೆ ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು): ನಾನು ಕೂಡ ಅವರಿಗೆ ಕೃತಜ್ಞತೆಗಳನ್ನು ಹೇಳುತ್ತಾ ಇದ್ದೇನೆ. ಈ ಕೆಲಸ ಸದನ ಮುಗಿಯುವುದರೊಳಗೆ ಎಂದಲ್ಲ, ಈ ತಿಂಗಳೊಳಗೆ ಟೆಂಡರ್ ಅಂತಿಮಗೊಳಿಸಿ, ಈ ಕಾಮಗಾರಿಯನ್ನು ಪ್ರಾರಂಭ ಮಾಡುತ್ತೇವೆ.

ಸಣ್ಣ ಕೈಗಾರಿಕೆಗಳ ಮಾರುಕಟ್ಟೆ ನಿಗಮದವರು ವಾರ್ತಾ ಮತ್ತು ಪ್ರಚಾರ ಇಲಾಖೆಗೆ ಸಂಬಂಧಿಸಿದ ಪುಸ್ತಕಗಳ ಮುದ್ರಣ.

324(2077)